International Journal of Kannada Research 2021; 7(3): 102-114

International Journal of Kannada Research
www.kannadajournal.com

**ISSN: 2454–5813**
IJKR 2021; 7(3): 102-114
© 2021 IJKR
www.kannadajournal.com
Received: 19-05-2021
Accepted: 21-06-2021

**ಡಾ.ಕೆ.ಶಿವಾನಂದಯ್ಯ**
ಸಹಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-ಕರ್ನಾಟಕ, ಭಾರತ

**Corresponding Author:**
**ಡಾ.ಕೆ.ಶಿವಾನಂದಯ್ಯ**
ಸಹಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-ಕರ್ನಾಟಕ, ಭಾರತ

# ಹೊಸದುರ್ಗ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು

**ಡಾ.ಕೆ.ಶಿವಾನಂದಯ್ಯ**

**ಸಾರಾಂಶ**

ಸ್ಥಳನಾಮಗಳು ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ನೆರವಾಗುತ್ತವೆ. ಚಲನಶೀಲ ಗುಣದಿಂದ ಕೂಡಿರುವ ಸ್ಥಳನಾಮಗಳನ್ನು ಬಹುಮುಖ್ಯ ಆಕರಗಳೆಂದು ಪರಿಗಣಿಸಲಾಗಿದೆ. ಸ್ಥಳನಾಮ ಅಧ್ಯಯನ ಬಹುಶಿಸ್ತಿನ ನೆಲೆಯಿಂದ ಕೂಡಿದೆ.ಭಾಷಾಶಾಸ್ತ್ರ, ಚರಿತ್ರೆ, ಜಾನಪದ, ಭೂಗೋಳಶಾಸ್ತ್ರ, ಮಾನವಶಾಸ್ತ್ರ, ಕುಲವಿಜ್ಞಾನ ಮುಂತಾದ ಹಲವು ಜ್ಞಾನಕ್ಷೇತ್ರಗಳ ನೆರವು ಅಗತ್ಯ. ಜೊತೆಗೆ ಎಲ್ಲ ಜ್ಞಾನಶಿಸ್ತುಗಳಿಗೆ ಸ್ಥಳನಾಮಗಳು ಮುಖ್ಯ ಆಕರವಾಗಿವೆ. ಸ್ಥಳನಾಮಗಳಲ್ಲಿ ಆ ಪ್ರದೇಶದ ಭೌಗೋಳಿಕ ವೈಶಿಷ್ಟ್ಯಗಳು ಅಂತರ್ಗತವಾಗಿರುವುದನ್ನು ಕಾಣಬಹುದು. ಬಹುಸಂಸ್ಕೃತಿಯ ಪ್ರತೀಕವಾಗಿರುವ ವಿವಿಧ ಸಮುದಾಯ, ಕಸುಬು, ವ್ಯಾಪಾರ, ಆಡಳಿತ, ದೈವಸಂಬಂಧಿ ಹೆಸರುಗಳು ಸ್ಥಳನಾಮಗಳಲ್ಲಿ ಕಂಡುಬರುತ್ತವೆ. ಇತಿಹಾಸ, ಭಾಷೆ ಮತ್ತು ಸಂಸ್ಕೃತಿ ಶೋಧಕ್ಕೆ ಸ್ಥಳನಾಮಗಳ ಆಕರವಾಗಿ ನೆರವಾಗುವುದರಿಂದ ಸ್ಥಳನಾಮ ಅಧ್ಯಯನ ಪ್ರಸ್ತುತವೆನಿಸುತ್ತದೆ.

**ಪ್ರಮುಖ ಪದಗಳು:** ಶಾಸನೋಕ್ತ ಸ್ಥಳನಾಮ: ಎಂದರೆ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮ.
ನಿಷ್ಪತ್ತಿ ನಿರ್ಣಯ: ಶಬ್ದದ ಹುಟ್ಟು, ವ್ಯುತ್ಪತ್ತಿ; ಒಂದು ಪದದ ಮೂಲವನ್ನು ಕಂಡು ಹಿಡಿಯುವುದು.
ಭೌಗೋಳಿಕ: ನಿರ್ದಿಷ್ಟ ಪ್ರದೇಶದ ಭೂಮಿಯ ಮೇಲ್ಮೈಲಕ್ಷಣಗಳು ಮತ್ತು ಅದರೊಂದಿಗೆ ಮಾನವ ಸಂಬಂಧ ಎಲ್ಲವನ್ನು ಒಳಗೊಂಡಿದೆ.
ಸಾಂಸ್ಕೃತಿಕ: ಬಹುಶಿಸ್ತೀಯ ಅಧ್ಯಯನ ವಿಧಾನ.ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ಆಯಾಮಗಳನ್ನು ಒಳಗೊಂಡ ಪರಿಕಲ್ಪನೆ.

**ಅಧ್ಯಯನದ ಮಹತ್ವ**

ಸ್ಥಳನಾಮ ಅಧ್ಯಯನ ಒಂದು ಪ್ರದೇಶದ ಇತಿಹಾಸ, ಭಾಷೆ, ಸಂಸ್ಕೃತಿಯನ್ನು ಅರಿಯಲು ನೆರವಾಗುತ್ತದೆ. ಜೊತೆಗೆ ಸಾಮಾಜಿಕ, ಧಾರ್ಮಿಕ ಹಿನ್ನೆಲೆಯನ್ನು ಗುರುತಿಸಲು ಸಹಾಯವಾಗುತ್ತದೆ. ಆದುದರಿಂದ ಹೊಸದುರ್ಗ ತಾಲೂಕಿನ ಶಾಸನೋಕ್ತ ಸ್ಥಳನಾಮಗಳ ಭಾಷಿಕ ನಿಷ್ಪತ್ತಿಯನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ. ಇದು ಸ್ಥಳನಾಮ ಅಧ್ಯಯನದಲ್ಲಿ ಬಹುಮುಖ್ಯ ಘಟ್ಟ ಎಂದು ಹೇಳಬಹುದು. ಇದು ಸ್ಥಳನಾಮಗಳ ಸಮಗ್ರ ಅಧ್ಯಯನಕ್ಕೆ ತುಂಬಾ ನೆರವಾಗುತ್ತದೆ.

**ಉದ್ದೇಶ**

ಹೊಸದುರ್ಗ ತಾಲ್ಲೂಕಿನ ಸ್ಥಳನಾಮಗಳನ್ನು ಕುರಿತು ಈವರೆಗೆ ನಡೆದ ಅಧ್ಯಯನಗಳನ್ನು ಗಮನಿಸಿದಾಗ ಭಾಷಾವಿಜ್ಞಾನದ ನೆಲೆಯಲ್ಲಿ ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ ಮಾಡಿರುವುದಿಲ್ಲ. ಪ್ರಯುಕ್ತ ಹೊಸದುರ್ಗ ತಾಲೂಕಿನ ಶಾಸನೋಕ್ತ ಸ್ಥಳನಾಮಗಳನ್ನು ಭಾಷಾವಿಜ್ಞಾನದ ನೆಲೆಯಲ್ಲಿ ನಿಷ್ಪತ್ತಿ ನಿರ್ಣಯದ ಉದ್ದೇಶ ಹೊಂದಿದೆ. ಇದು ಸ್ಥಳನಾಮಗಳ ಅಧ್ಯಯನದಲ್ಲಿ ಸ್ಥಳಪುರಾಣ, ಸ್ಥಳೀಯ ಜನರ ಅಭಿಪ್ರಾಯ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಚರ್ಚಿಸಲು ತುಂಬಾ ನೆರವಾಗುತ್ತದೆ.

**ಅಧ್ಯಯನ ವಿಧಾನ**

ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಫಿಗ್ರಾಫಿಯಾ ಕರ್ನಾಟಿಕ ಸಂಪುಟದಲ್ಲಿ ಪ್ರಕಟವಾಗಿರುವ ತಾಲೂಕಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿಯ ಜೊತೆಗೆ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ ಮಾಡಲು ಪ್ರಯತ್ನಿಸಲಾಗಿದೆ.

**ಪ್ರಸ್ತಾವನೆ**

ಸ್ಥಳನಾಮಗಳು ಮಾನವನ ಬದುಕಿನಲ್ಲಿ ಮಹತ್ತರ ಸ್ಥಾನ ಪಡೆದಿವೆ. ಪ್ರಪಂಚದಲ್ಲಿರುವ ಪ್ರತಿಯೊಂದು ಪಶು, ಪಕ್ಷಿ, ಪ್ರಾಣಿ ಮತ್ತು ವಸ್ತುವನ್ನು ಒಂದೊಂದು ಹೆಸರಿನ ಮೂಲಕ ಗುರುತಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಹೀಗೆ ಹೆಸರಿಡುವುದರ ಹಿಂದೆ ಆಯಾಯ ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ ಅಂಶಗಳು ಮುಖ್ಯ ಪ್ರೇರಣೆಯನ್ನು ಒದಗಿಸಿರುತ್ತವೆ. ಆ ಕಾರಣಕ್ಕಾಗಿಯೇ ಜಗತ್ತಿನಾದ್ಯಂತ ಎಷ್ಟೆಷ್ಟು ಮಾನವ ನೆಲೆಗಳಿವೆಯೋ ಅಷ್ಟು ಬೇರೆ ಬೇರೆಯದಾದ ಹೆಸರುಗಳನ್ನು ಕಾಣಬಹುದು. ಈ ಸ್ಥಳನಾಮಗಳು ಆರಂಭದಲ್ಲಿ ನಿರ್ದಿಷ್ಟವಾದ ಕಾರಣದಿಂದ ರೂಪುತಳೆದಿದ್ದರೂ ಕಾಲಕ್ರಮೇಣ ಮೂಲ ಕಾರಣ ಮರೆತು ಹೋಗಿರಬಹುದು. ಮತ್ತು ಅನ್ಯ ಪ್ರಭಾವಗಳಿಂದಾಗಿ ಸ್ಥಳನಾಮಗಳು ಬದಲಾವಣೆಯಾಗಿರಬಹುದು. ಪ್ರಾದೇಶಿಕ ಅಂತಸತ್ವವನ್ನು ಒಳಗೊಂಡಿರುವ ಸ್ಥಳನಾಮಗಳು ಭೌಗೋಳಿಕ ಅನನ್ಯತೆಯ ಪ್ರತಿರೂಪಗಳಾಗಿವೆ. ಬದಲಾಗಿರುವ ಸ್ಥಳನಾಮಗಳು ಐತಿಹಾಸಿಕ ಸಂಗತಿಗಳನ್ನು ಒಳಗೊಂಡಿರಬಹುದು. ಸ್ಥಳನಾಮಗಳ ಅಧ್ಯಯನದಿಂದ ಹೆಸರಿನಲ್ಲಿ ಹುದುಗಿರುವ ಸಂಗತಿಗಳನ್ನು ಗುರುತಿಸಬಹುದು. ಆ ಮೂಲಕ ಪ್ರಾದೇಶಿಕ ಮಹತ್ವದೊಡನೆ ಭೌಗೋಳಿಕ, ಸಾಂಸ್ಕೃತಿಕ, ಜನಾಂಗಿಕ, ಭಾಷಿಕ ಸಂಗತಿಗಳನ್ನು ಅರಿಯಲು ನಿಷ್ಪತ್ತಿ ನಿರ್ಣಯ ನೆರವಾಗುತ್ತದೆ. “ಗ್ರಾಮನಾಮಗಳ ಅಧ್ಯಯನ ಪ್ರಸಂಗದಲ್ಲಿ ಅದರ ನಿಷ್ಪತ್ತಿ ನಿರ್ಣಯ ಪ್ರಥಮ ಮತ್ತು ಪ್ರಮುಖ ಅಂಶವಾಗಿದೆ. ಅದಿಲ್ಲದೆ ಮಾಡುವ ಅಧ್ಯಯನ ವ್ಯರ್ಥ ಮತ್ತು ನಿಷ್ಪ್ರಯೋಜನಕಾರಿ. ಅದರ ನಿಷ್ಪತ್ತಿ ನಿರ್ಣಯ ಅಷ್ಟು ಸುಲಭವಾದುದು ಅಲ್ಲ”.[1]

ಪ್ರಸ್ತುತ ಲೇಖನದಲ್ಲಿ ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ ಮಾಡುವ ಪ್ರಯತ್ನಮಾಡಲಾಗಿದೆ. ಭಾಷಾವೈಜ್ಞಾನಿಕ ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಸ್ಥಳನಾಮಗಳ ಶಾಬ್ದಿಕ ರೂಪವನ್ನು ಅಕಾರಾದಿಯಾಗಿ ವಿಶ್ಲೇಷಿಸಲಾಗಿದೆ. ಶಬ್ದದ ಪ್ರಾಚೀನತಮ ರೂಪವನ್ನು ಮೊದಲು ಗುರುತಿಸಲಾಗುವುದು. ಅನಂತರ ಭಾಷಿಕ ಪಲ್ಲಟ, ಧ್ವನಿವ್ಯತ್ಯಾಸ, ಸ್ವರ ಮತ್ತು ಅಕ್ಷರ ಲೋಪ, ತದ್ಭವರೂಪ ಮತ್ತು ಸೌಲಭ್ಯಾಕಾಂಕ್ಷೆಯಿಂದಾಗಿರುವ ಭಾಷಿಕ ಬದಲಾವಣೆಗಳನ್ನು ಪರಿಶೀಲಿಸಿ ನಿಷ್ಪತ್ತಿ ನಿರ್ಣಯ ಮಾಡಲಾಗುವುದು. ನಿರ್ದಿಷ್ಟ ಆಕೃತಿಮಾ ಮತ್ತು ವಾರ್ಗಿಕ ಆಕೃತಿಮಾಗಳ ಅರ್ಥ ನಿಷ್ಪತ್ತಿ ಮತ್ತು ನಿರ್ಣಯವನ್ನು ಮುಖ್ಯವಾಗಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಶ್ರೀನಿವಾಸರಿತ್ತಿ ಅವರ ಕರ್ನಾಟಕ ಗ್ರಾಮಸೂಚಿ, ತಾಲೂಕು ದಂಡಾಧಿಕಾರಿಗಳಾದ ತಹಶೀಲ್ದಾರ್ ಅವರು ನೀಡಿದ ಹೋಬಳಿವಾರು ಕಂದಾಯ ಮತ್ತು ಮಜರೆ ಗ್ರಾಮಗಳ ಪಟ್ಟಿಯನ್ನು ಪರಿಶೀಲಿಸಿ ಹೊಸದುರ್ಗ ತಾಲೂಕಿನಲ್ಲಿ ಒಟ್ಟು ನಾಲ್ಕುನೂರ ಹದಿಮೂರು ಸ್ಥಳನಾಮಗಳಿರುವುದನ್ನು ಗುರುತಿಸಿದೆ. ಭಾಷಾವಿಜ್ಞಾನದ ನೆಲೆಯಲ್ಲಿ ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ ಮಾಡಲು ಶಾಸನೋಕ್ತ ಸ್ಥಳನಾಮಗಳನ್ನು ಆಯ್ದುಕೊಂಡಿದೆ. ಸುಮಾರು ಎರಡುನೂರು ಶಾಸನಗಳನ್ನು ಅಧ್ಯಯನ ಮಾಡಿ, ಅದರಲ್ಲಿ ಎಪ್ಪತ್ತೇಳು ಶಾಸನಗಳಲ್ಲಿ ವಿವಿಧ ಸ್ಥಳನಾಮಗಳು ಉಲ್ಲೇಖವಾಗಿರುವುದನ್ನು ಗುರುತಿಸಲಾಯಿತು. ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಹೊಸದುರ್ಗ ತಾಲೂಕಿನ ಐವತ್ನಾಲ್ಕು ಸ್ಥಳನಾಮಗಳನ್ನು ಭಾಷಾವಿಜ್ಞಾನದ ನೆಲೆಯಲ್ಲಿ ನಿಷ್ಪತ್ತಿಯನ್ನು ನಿರ್ಣಯಿಸಲಾಗಿದೆ.

ಹೊಸದುರ್ಗ ತಾಲೂಕಿನ ಶಾಸನೋಕ್ತ ಸ್ಥಳನಾಮಗಳು

| ಕ್ರ.ಸಂ | ಶಾಸನೋಕ್ತ ಸ್ಥಳನಾಮ | ಶಾಸನ ಸಂಖ್ಯೆ | ಶಾಸನ ದೊರೆತ ಸ್ಥಳ | ಶಾಸನದ ಕಾಲ (ಕ್ರಿ.ಶ) |
|---|---|---|---|---|
| 1 | ಅಗ್ರಹಾರ | 96 | ಮತ್ತೋಡು | 1736 |
| 2 | ಅಡವಿಸಂಗೇನಹಳ್ಳಿ | 132 | ಮಳಲಿ | 1533 |
| 3 | ಅತ್ತಿಮಗೆ | 102<br>103 | ಅತ್ತಿಮಗೆ<br>ಅತ್ತಿಮಗೆ | 1681<br>1681 |
| 4 | ಅರಳೀಹಳ್ಳಿ | 113 | ಬಾಗೂರು | 1556 |
| 5 | ಆನಿವಾಳ | 121<br>134 | ನೀರುಗುಂದ<br>ಆನಿವಾಳ | 1240<br>- |

| | | | | |
|---|---|---|---|---|
| 6 | ಅರೇಹಳ್ಳಿ | 101 | ಅರೇಹಳ್ಳಿ | 1707 |
| 7 | ಆಲದಹಳ್ಳಿ | 128<br>129 | ಆಲದಹಳ್ಳಿ<br>ಆಲದಹಳ್ಳಿ | 1515<br>? |
| 8 | ಕಡದನಕೆರೆ | 132 | ಮಳಲಿ | 1533 |
| 9 | ಕಡವಗೆರೆ | 12 ಚಿ.ನಾ,ಹಳ್ಳಿ | ನಾಯಿಗೆರೆ | 1137 |
| 10 | ಕಡ್ಲೆಕಂಸಾಗರ | 96 | ಮತ್ತೋಡು | 1736 |
| 11 | ಕಬ್ಬಳ | 17 ಚಿ.ನಾ.ಹಳ್ಳಿ | ಸೂಜಿಗಲ್ಲು | 1215(?) |
| 12 | ಕಲ್ಕೆರೆ | 125 | ಕಲ್ಕೆರೆ | 1535 |
| 13 | ಕಂಚೀಪುರ | ತಾಮ್ರಶಾಸನ | - | - |
| 14 | ಕೃಷ್ಣಾಪುರ | 113 | ಬಾಗೂರು | 1556 |
| 15 | ಕಾರೇಹಳ್ಳಿ | 96 | ಮತ್ತೋಡು | 1736 |
| 16 | ಕ್ಯಾದಿಗೆರೆ | 132 | ಮಳಲಿ | 1533 |
| 17 | ಕರುಬರಹಳ್ಳಿ | 92 | ಕೆಲ್ಲೋಡು | 1605 |
| 18 | ಕುಂದೂರು | 113<br>121 | ಬಾಗೂರು<br>ನೀರುಗುಂದ | 1556<br>1240 |
| 19 | ಕೆಲ್ಲೋಡು | 92<br>132 | ಕೆಲ್ಲೋಡು<br>ಮಳಲಿ | 1605<br>1533 |
| 20 | ಕೈನಡು | 13 ಚಿ.ನಾ.ಹಳ್ಳಿ | ಕೈನಡು | 1181 |
| 21 | ಕೊಂಡಜ್ಜಿ | 121 | ನೀರುಗುಂದ | 1240 |
| 22 | ಗರಗ | 19 ಚಿ.ನಾ,ಹಳ್ಳಿ | ಗರಗ | 1636 |
| 23 | ಗಂಜಿಕೆರೆ | 96 | ಮತ್ತೋಡು | 1736 |
| 24 | ಗುಡ್ಡದನೇರಲಕೆರೆ | 94 | ಮತ್ತೋಡು | 1511 |
| 25 | ಗೊಲ್ಲರಹಳ್ಳಿ | 94 | ಮತ್ತೋಡು | 1511 |
| 26 | ಚನ್ನಸಮುದ್ರ | 132 | ಮಳಲಿ | 1533 |
| 27 | ಚಿಕ್ಕಬ್ಯಾಲದಕೆರೆ | ತಾಮ್ರಶಾಸನ | ಮತ್ತೋಡು | - |
| 28 | ತಣಿಗೇಕಲ್ಲು | 42 | ಬನಸೀಹಳ್ಳಿ | - |
| 29 | ತಂಡಗ | 18 ಚಿ.ನಾ.ಹಳ್ಳಿ | ತಂಡಗ | 1149 |
| 30 | ತುಂಬಿನಕೆರೆ | 10 ಚಿ.ನಾ,ಹಳ್ಳಿ | ಬೂದಿಹಾಳು | 1525 |
| 31 | ದೇವಿಗೆರೆ | 124 | ಚಿಕ್ಕಯಗಟಿ | 1208 |
| 32 | ದೊಡ್ಡಗಟ್ಟ | 107 | ಜಾನಕಲ್ಲು | 1303 |
| 33 | ದೊಡ್ಡತೇಕಲವಟ್ಟಿ | 14 ಚಿ.ನಾ.ಹಳ್ಳಿ | ದೊಡ್ಡತೇಕಲವಟ್ಟಿ | 1187 |
| 34 | ನಾಗೇನಹಳ್ಳಿ | 113<br>132 | ಬಾಗೂರು<br>ಮಳಲಿ | 1556<br>1533 |
| 35 | ನೀರುಗುಂದ | 104<br>118<br>121<br>122<br>132<br>136 | ಹುಣವಿನಡು<br>ಬಾಗೂರು<br>ನೀರುಗುಂದ<br>ನೀರುಗುಂದ<br>ಮಳಲಿ<br>ಹೊನ್ನೆಕರೆ | 1228<br>1555<br>1240<br>1268<br>1533<br>1307 |
| 36 | ನೇರಲಕೆರೆ | 06 ಚಿ.ನಾ,ಹಳ್ಳಿ | ಬೂದಿಹಾಳು | 1535 |
| 37 | ಬಲ್ಲಾಳಸಮುದ್ರ | 126<br>127 | ಬಲ್ಲಾಳಸಮುದ್ರ<br>ಬಲ್ಲಾಳಸಮುದ್ರ | 1692<br>1387 |
| 38 | ಬಾಗೂರು | 108<br>110<br>111 | ಹೊನ್ನೇನಹಳ್ಳಿ<br>ಬಾಗೂರು<br>ಬಾಗೂರು | 1518<br>1546<br>1540 |

| | | | | |
|---|---|---|---|---|
| | | 112<br>114<br>119<br>128 | ಬಾಗೂರು<br>ಬಾಗೂರು<br>ಬಾಗೂರು<br>ಆಲದಹಳ್ಳಿ | 1554<br>1552<br>1515<br>1515 |
| 39 | ಬೆಲಗೂರು | 06 ಚಿ.ನಾ,ಹಳ್ಳಿ<br>27 ಚಿ.ನಾ,ಹಳ್ಳಿ | ಬೂದಿಹಾಳು<br>ಹೆಗ್ಗೆರೆ | 1535<br>1314 |
| 40 | ಬೇವಿನಹಳ್ಳಿ | 121 | ನೀರುಗುಂದ | 1240 |
| 41 | ಮತ್ತೋಡು | 96<br>98<br>99<br>101 | ಮತ್ತೋಡು<br>ನೇರ್ಲಕೆರೆ<br>ನೇರ್ಲಕೆರೆ<br>ಅರೇಹಳ್ಳಿ | 1736<br>1672<br>1747<br>1707 |
| 42 | ಮಧುರೆ | 113 | ಬಾಗೂರು | 1556 |
| 43 | ಮಳಲಿ | 130<br>131 | ಮಳಲಿ<br>ಮಳಲಿ | 1226<br>1237 |
| 44 | ಮಾಡದಕೆರೆ | 107 | ಜಾನಕಲ್ಲು | 1303 |
| 45 | ಮಾರಗೊಂಡನದಿಬ್ಬ | 132 | ಮಳಲಿ | 1533 |
| 46 | ಮೆಟ್ಟಿನಹೊಳೆ | 132 | ಮಳಲಿ | 1533 |
| 47 | ಮೆಣಸಿನಡು | 96 | ಮತ್ತೋಡು | 1736 |
| 48 | ಶ್ರೀರಂಗಪುರ | 90 | ಹೊಸದುರ್ಗ | 1659 |
| 49 | ಶ್ರೀರಾಮಪುರ | 125<br>05 ಚಿ.ನಾ.ಹಳ್ಳಿ<br>06 ಚಿ.ನಾ.ಹಳ್ಳಿ<br>07 ಚಿ.ನಾ.ಹಳ್ಳಿ<br>08 ಚಿ.ನಾ.ಹಳ್ಳಿ<br>10 ಚಿ.ನಾ.ಹಳ್ಳಿ | ಕಲ್ಕೆರೆ<br>ಬೂದಿಹಾಳು<br>ಬೂದಿಹಾಳು<br>ಬೂದಿಹಾಳು<br>ಬೂದಿಹಾಳು<br>ಬೂದಿಹಾಳು | 1535<br>1535<br>1535<br>1554<br>1573<br>1525 |
| 50 | ಸಿರಗೊಂಡನಹಳ್ಳಿ | 96 | ಮತ್ತೋಡು | 1736 |
| 51 | ಹುಣವಿನಡು | 104 | ಹುಣವಿನಡು | 1228 |
| 52 | ಹೆಗ್ಗೆರೆ | 06 ಚಿ.ನಾ.ಹಳ್ಳಿ<br>21 ಚಿ.ನಾ,ಹಳ್ಳಿ<br>24 ಚಿ.ನಾ.ಹಳ್ಳಿ<br>25 ಚಿ.ನಾ.ಹಳ್ಳಿ | ಬೂದಿಹಾಳು<br>ಹೆಗ್ಗೆರೆ<br>ಹೆಗ್ಗೆರೆ<br>ಹೆಗ್ಗೆರೆ | 1535<br>1160<br>1279<br>1312 |
| 53 | ಹೆಬ್ಬಳ್ಳಿ | 85<br>86<br>87<br>88 | ಹೆಬ್ಬಳ್ಳಿ<br>ಹೆಬ್ಬಳ್ಳಿ<br>ಹೆಬ್ಬಳ್ಳಿ<br>ಹೆಬ್ಬಳ್ಳಿ | 977<br>975<br>975<br>965 |
| 54 | ಹೊನ್ನೆಕೆರೆ | 136<br>137<br>139 | ಹೊನ್ನೆಕೆರೆ<br>ಹೊನ್ನೆಕೆರೆ<br>ಕೋಡಿಹಳ್ಳಿ | 1307<br>1307<br>- |

**ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ**

**1. ಅಗ್ರಹಾರ**

ಶಾಸನದಲ್ಲಿ ಗಂಜಿಗೇರ ಅಗ್ರಹಾರ[2] ಎಂದು ಉಲ್ಲೇಖಗೊಂಡಿದೆ.

ಅಗ್ರ= ಶ್ರೇಷ್ಠ, ಬ್ರಾಹ್ಮಣ;[3] ಆಹಾರ=ದೇಶ, ಸ್ಥಳ[4]

∴ಅಗ್ರ+ಆಹಾರ>ಅಗ್ರಾಹಾರ>ಅಗ್ರಹಾರ

∴ಬ್ರಾಹ್ಮಣರ ಪೋಷಣೆಗಾಗಿ ದಾನ ಕೊಟ್ಟ ಭೂಮಿ, ಸ್ಥಳಗಳನ್ನು ಅಗ್ರಹಾರಗಳು ಎಂದು ಕರೆಯುತ್ತಿದ್ದರು.

**2. ಅಡವಿಸಂಗೇನಹಳ್ಳಿ**

ಶಾಸನದಲ್ಲಿ ಶ್ರೀಸಂಗಯ್ಯನಹಳ್ಳ[5] ಎಂದು ಉಲ್ಲೇಖಗೊಂಡಿದೆ.

ಸಂಗಯ್ಯ= ವ್ಯಕ್ತಿ ವಾಚಕ

ಅಡವಿ= ಕಾಡು, ಅರಣ್ಯ[6]

∴

ಅಡವಿ+ಸಂಗಯ್ಯ+ನ+ಹಳ್ಳ>ಅಡವಿಸಂಗಯ್ಯನಹಳ್ಳ>ಅಡವಿಸಂಗೇನಹಳ್ಳಿ

∴ ಅಡವಿಯಲ್ಲಿ ನೆಲೆಸಿರುವ ಸಂಗಯ್ಯ ಎಂಬುವವನ ನೆಲೆ.

**3. ಅತ್ತಿಮಗೆ**

ಶಾಸನಗಳಲ್ಲಿ ಅತ್ತಿಮೊಘೆ[7] ಎಂದು ಉಲ್ಲೇಖಗೊಂಡಿದೆ.

ಅತ್ತಿ= ಆಲ[8]

ಮಗೆ=(<ಸಂ.ಮೊಗೆ,ಮೊಘೆ) ಮಣ್ಣಿನ ಪಾತ್ರೆ,, ಒಂದು ಬಗೆಯ ಭೂಮಿ, ಹಳದಿ ಬಣ್ಣದಿಂದ ಕೂಡಿದ ಫಲವತ್ತಾದ ಭೂಮಿ[9]

∴ಅತ್ತಿ+ಯ+ಮಗೆ>ಅತ್ತಿಯಮಗೆ>ಅತ್ತಿಮಗೆ

∴ಆಲದ ಮರ ಇರುವ ನೀರಿನ ನೆಲೆ ಎಂದು ಅರ್ಥೈಸಬಹುದು.

**4. ಅರಳೀಹಳ್ಳಿ**

ಶಾಸನದಲ್ಲಿ ಅರಳಿಹಳ್ಳಿ ಎಂದು ಉಲ್ಲೇಖಗೊಂಡಿದೆ.[10]

ಅರಳಿ=ಅಶ್ವತ್ಥವೃಕ್ಷ,ಬೋಧಿವೃಕ್ಷ[11]

∴ಅರಳಿ+ಯ+ಹಳ್ಳಿ>ಅರಳಿಯಹಳ್ಳಿ>ಅರಳೀಹಳ್ಳಿ

∴ಅರಳಿಯ ಮರವಿರುವ ನೆಲೆ ಅಥವಾ ಅರಳಿಯ ಮರದ ಸನಿಹದ ನೆಲೆ ಎಂದು ಹೇಳಬಹುದು.

**5. ಆನಿವಾಳ**

ಶಾಸನಗಳಲ್ಲಿ ಆನೆವಳ್ಳ[12] ಆನೆವಾಳ[13] ಎಂದು ಉಲ್ಲೇಖಗೊಂಡಿದೆ.

ಆನೆ=ಗಜ,ಕರಿ;ಒಂದು ಪ್ರಾಣಿ[14]

ವಳ್ಳ=ತದ್ಧಿತ ಪ್ರತ್ಯಯ

ಮಾಳ=(ಎತ್ತರವಾದ) ಬಯಲುಪ್ರದೇಶ,-ಮೈದಾನ[15]

1. ಆನೆ+ಯ+ವಳ್ಳ>ಆನೆಯವಳ್ಳ>ಆನೆವಳ್ಳ>ಆನೆವಾಳ>ಆನಿವಾಳ
2. ಆನೆ+ಯ+ಮಾಳ>ಆನೆಯಮಾಳ>ಆನೆಮಾಳ>ಆನೆವಾಳ>ಆನಿವಾಳ

∴ಆನೆಗಳನ್ನು ಕಟ್ಟುತ್ತಿದ್ದ ಮೈದಾನದ ನೆಲೆ ಎಂದು ಅರ್ಥೈಸಬಹುದು.

**6. ಅರೇಹಳ್ಳಿ**

ಶಾಸನದಲ್ಲಿ ಅರೆಹಳ್ಳಿ ಎಂದು ಉಲ್ಲೇಖಗೊಂಡಿದೆ.[16]

ಅಱೆ,ಅರೆ=ಕಲ್ಲುಬಂಡೆ,ದೊಡ್ಡಶಿಲೆ,ಕಲ್ಲುಗುಂಡು[17]

∴ಅರೆ+ಯ+ಹಳ್ಳಿ>ಅರೆಯಹಳ್ಳಿ>ಅರೇಹಳ್ಳಿ

∴ಕಲ್ಲುಬಂಡೆಗಳ ನೆಲೆ ಎಂದು ಅರ್ಥೈಸಬಹುದು.

**7. ಆಲದಹಳ್ಳಿ**

ಶಾಸನಗಳಲ್ಲಿ ಆಲದಹಳಿ, ಆಲದಹಳ್ಳಿ, ಆಲಹಳಿ ಎಂದು ಉಲ್ಲೇಖಗೊಂಡಿದೆ.[18]

ಆಲ=ಹಾಲುಮರ, ನ್ಯಗ್ರೋಧ, ವಟವೃಕ್ಷ, ಹಳದಿಬಣ್ಣದ ಹೂವು; ಅರದಾಳ: ಒಬ್ಬಾತನ ಹೆಸರು[19]

∴ಆಲ+ದ+ಹಳ್ಳಿ>ಆಲದಹಳ್ಳಿ

∴ಆಲದಮರ ಇರುವ ನೆಲೆ ಎಂದು ಅರ್ಥೈಸಬಹುದು.

**8. ಕಡದನಕೆರೆ**

ಶಾಸನದಲ್ಲಿ ಕಟಕನಕೆರೆ[20] ಎಂದು ಉಲ್ಲೇಖಗೊಂಡಿದೆ.

ಕಟಕ= ಏಡಿ, ಬಿಳುಪು ಅಥವಾ ಕೆಂಪುಬಣ್ಣದ ಗಟ್ಟಿಮಣ್ಣಿನ ಒಂದು ಪ್ರಕಾರ, ಹಿಟ್ಟುಗಲ್ಲು[21]

ಕಟಕಯ= ಒಬ್ಬಾತನ ಹೆಸರು[22]

∴ಕಟಕಯ+ನ+ಕೆರೆ>ಕಟಕಯನಕೆರೆ>ಕಟಕನಕೆರೆ>ಕಡದನಕೆರೆ>ಕಡದಿನಕೆರೆ

∴ಕಟಕಯ ಎಂಬ ವ್ಯಕ್ತಿ ಇರುವ ಕೆರೆಯ ಸನಿಹದ ನೆಲೆ ಎಂದೂ, ಹಿಟ್ಟುಗಲ್ಲು ಸಮೀಪವಿರುವ ಕೆರೆ ಎಂದೂ ಅರ್ಥೈಸಬಹುದು.

**9. ಕಡವಗೆರೆ**

ಶಾಸನದಲ್ಲಿ ಕಡವದಕೆಱೆ[23] ಎಂದು ಉಲ್ಲೇಖಗೊಂಡಿದೆ.

ಕಡವ=ಕಡವೆ=ದೊಡ್ಡಜಿಂಕೆ, ಸಾರಂಗ[24]

∴ಕಡವ+ದ+ಕೆಱೆ>ಕಡವದಕೆಱೆ>ಕಡವಕೆಱೆ>ಕಡವಗೆರೆ

∴ಸಾರಂಗಗಳಿರುವ ಕೆರೆಯ ಸನಿಹದ ನೆಲೆ.

**10. ಕಡ್ಲೆಕಂಸಾಗರ**

ಶಾಸನದಲ್ಲಿ ಕಡ್ಲೆಕಂಬಸಾಗರ[25] ಎಂದು ಉಲ್ಲೇಖಗೊಂಡಿದೆ.

ಕಡಲೆ=ಕಡ್ಲೆ, ಒಂದು ಬಗೆಯ ದ್ವಿದಳಧಾನ್ಯ[26]

ಕಂಪಣ=ಒಬ್ಬಾತನ ಹೆಸರು[27]

∴ಕಡಲೆ<ಕಡ್ಲೆ+ಕಂಪಣ+ಸಾಗರ>ಕಡ್ಲೆಕಂಪಣಸಾಗರ>ಕಡ್ಲೆಕಂಬಸಾಗರ>ಕಡ್ಲೆಕಂಸಾಗರ

∴ಕಡಲೆಧಾನ್ಯವನ್ನು ವಿಶೇಷವಾಗಿ ಬೆಳೆಯುವ, ಕಂಪಣ ಎಂಬಾತ ನೆಲೆಸಿರುವ ನೆಲೆ.

ಎರಡು ಕಂಸಾಗರಗಳಿದ್ದು, ಒಂದನ್ನು ಇನ್ನೊಂದರಿಂದ ಬೇರ್ಪಡಿಸುವ ಸಲುವಾಗಿ ಅಜ್ಜಿ(ಅಜ್ಜಿಗ) ಕಡ್ಲೆ(ಕಡಲೆ) ಎಂಬ ಉಪ ಆಕೃತಿಮಾಗಳು ಸೇರಿವೆ.

**11.ಕಬ್ಬಳ**

ಶಾಸನಗಳಲ್ಲಿ ಕಬ್ಬಳ[28] ಕಬ್ಬಳ್ಳ[29] ಎಂದು ಉಲ್ಲೇಖಗೊಂಡಿದೆ.

ಕಬ್ಬಳ=ಕಬ್ಬಳ್ಳ, ಕರಿಯಹಳ್ಳ, ಆ ಹಳ್ಳದ ಬಳಿಯ ಊರು[30]

ಕಬ್ಬಳ್ಳಿ=ಒಂದು ಜಾತಿಯ ಪಕ್ಷಿ[31]

ಕರ್ಬಳ್ಳಿ=ಕರಿಬಳ್ಳಿ[32]

∴ಕಪ್ಪ+ಆನೆಯ+ಹಳ್ಳ>ಕಪ್ಪನೆಯಹಳ್ಳ>ಕಪ್ಪಳ್ಳ>ಕಬ್ಬಳ್ಳ>ಕಬ್ಬಳ

∴ಕರಿಯಹಳ್ಳದ ಬಳಿ ಇರುವ ಸ್ಥಳ, ಕರಿಬಳ್ಳಿ ಇರುವ ನೆಲೆ ಎಂದು ಅರ್ಥೈಸಬಹುದು.

ಇದೇ ಹೆಸರಿನ ಇನ್ನೊಂದು ಸ್ಥಳನಾಮ ಇದೆ.

**12.ಕಲ್ಕೆರೆ**

ಶಾಸನದಲ್ಲಿ ಕಲ್ಲಕೆಱೆ,ಕಲ್ಲಕೆರೆ ಎಂದು ಉಲ್ಲೇಖಗೊಂಡಿದೆ.[33]

∴ಕಲ್ಲು+ಕೆಱೆ>ಕಲ್ಲುಕೆಱೆ>ಕಲ್ಲುಕೆರೆ>ಕಲ್ಲಕೆರೆ>ಕಲ್ಕೆರೆ

∴ಕಲ್ಲುಬಂಡೆಗಳ ಸನಿಹ ಇರುವ ಕೆರೆಯ ನೆಲೆ ಎಂದು ಅರ್ಥೈಸಬಹುದು.

**13.ಕಂಚೀಪುರ**

ಶಾಸನದಲ್ಲಿ ಕಂಚೀಪುರ[34] ಎಂದೇ ಉಲ್ಲೇಖಗೊಂಡಿದೆ.

∴ಕಂಚು+ಇನ+ಪುರ>ಕಂಚಿನಪುರ>ಕಂಚೀಪುರ

∴ಕಂಚು ಮೊದಲಾದ ಲೋಹದ ತಯಾರಿಕೆಯ ನೆಲೆ

∴ಕಂಚೀವರದಸ್ವಾಮಿ ನೆಲೆಸಿರುವುದರಿಂದ ಕಂಚೀಪುರ ಎಂಬ ಹೆಸರು ಬಂದಿದೆ ಎಂದು ಹೇಳಬಹುದು.

**14.ಕೃಷ್ಣಾಪುರ**

ಶಾಸನಗಳಲ್ಲಿ ಕೃಷ್ಣಾಪುರ[35] ಎಂದೇ ಉಲ್ಲೇಖಗೊಂಡಿದೆ.

ಎರಕೃಷ್ಣಪ್ಪ=ಕೃಷ್ಣಪ್ಪನಾಯಕ=ವಿಜಯನಗರದ ಅರಸ ಅಚ್ಯುತರಾಯನ ಕಾಲದಲ್ಲಿ ಬಾಗೂರನ್ನು ಆಳುತ್ತಿದ್ದನು[36]

∴ಕೃಷ್ಣಪ್ಪನಾಯಕ+ನ+ಪುರ>ಕೃಷ್ಣಪ್ಪನಾಯಕನಪುರ>ಕೃಷ್ಣಾಪುರ

∴ಬಾಗೂರಿನ ಹೊರಗೆ ಇರುವ ಕೃಷ್ಣಸಮುದ್ರ ಗ್ರಾಮವನ್ನು ಕೃಷ್ಣಪ್ಪನ ನೆನಪಿಗೆ ಅವನ ಪ್ರತಿನಿಧಿಯು ಕೃಷ್ಣಾಪುರ ಎಂದು ಪ್ರತಿನಾಮಕರಣ ಮಾಡಿದನೆಂದು ಶಾಸನದಲ್ಲಿ ಉಲ್ಲೇಖಗೊಂಡಿದೆ.[37]

ಇದೇ ಹೆಸರಿನ ಇನ್ನೊಂದು ಸ್ಥಳನಾಮ ಶ್ರೀರಾಂಪುರ ಹೋಬಳಿಯಲ್ಲಿದೆ

**15.ಕಾರೇಹಳ್ಳಿ**

ಶಾಸನದಲ್ಲಿ ಕಾರೆಹಳ್ಳಿ ಎಂದು ಉಲ್ಲೇಖಗೊಂಡಿದೆ.[38]

ಕಾರೆ=ಒಂದು ಬಗೆಯ ಹಣ್ಣುಬಿಡುವ ಮುಳ್ಳುಗಿಡ[39]

ಕಾರೆಯ=ಜೈನಯತಿಗಳಲ್ಲಿ ಒಂದು ಪಂಗಡ[40]

∴ಕಾರೆಯ+ಹಳ್ಳಿ>ಕಾರೆಯಹಳ್ಳಿ>ಕಾರೇಹಳ್ಳಿ

∴ಕಾರೆಯ ಗಿಡವಿರುವ ನೆಲೆ, ಜೈನರು ನೆಲೆಸಿರುವ ಸ್ಥಳ ಎಂದು ಅರ್ಥೈಸಬಹುದು.

**16.ಕ್ಯಾದಿಗೆರೆ**

ಶಾಸನದಲ್ಲಿ ಕೇದಗ್ಗೆರೇ ಎಂದು ಉಲ್ಲೇಖಗೊಂಡಿದೆ.[41]

ಕೇದಗೆ, ಕೇದಂಗೆ, ಕೇದಕೆ, ಕೇದಗಿ, ಕೇದಿಗೆ=ಸುರಹೊನ್ನೆ ಕೇದಿಗೆ ಮೊದಲಾದ ಕಾಡು ಹೂಗಳು[42] ಸುರಹೊನ್ನೆಯಂತಹ ಸುವಾಸನೆಯಿಂದ ಕೂಡಿದ ಹೂ

∴ಕೇದಗೆ+ಯ+ಕೆರಱೆ>ಕೇದಗೆಯಕೆಱೆ>ಕೇದಗೆಗೆರೆ>ಕೇದಿಗೆಗೆರೆ>ಕ್ಯಾದಿಗೆಗೆರೆ>ಕ್ಯಾದಿಗೆರೆ

∴ಕೇದಗೆಯ ಹೂ ಗಿಡದ ಸನಿಹದ ಕೆರೆ ಎಂದು ಅರ್ಥೈಸಬಹುದು.

**17.ಕುರುಬರಹಳ್ಳಿ**

ಶಾಸನದಲ್ಲಿ ಕುರುಬಱಹಳ್ಳಿ ಎಂದು ಉಲ್ಲೇಖಗೊಂಡಿದೆ.[43]

ಕುರುಬ=ಒಂದು ಜನಾಂಗ

∴ಕುರುಬ+ರ+ಹಳ್ಳಿ>ಕುರುಬರಹಳ್ಳಿ

∴ಕುರಬ ಜನಾಂಗದ ನೆಲೆ. ಇದೇ ಹೆಸರಿನ ಇನ್ನೊಂದು ಸ್ಥಳನಾಮ ಕಸಬಾ ಹೋಬಳಿಯಲ್ಲಿದೆ.

**18.ಕುಂದೂರು**

ಶಾಸನಗಳಲ್ಲಿ ಕುಂದೂರು ಎಂದೇ ಉಲ್ಲೇಖಗೊಂಡಿದೆ.[44]

ಕುಂದ= ಕುಂದಿ, ಗುಂದ, ಗುಂದೆ, ಬೆಟ್ಟ, ಗುಡ್ಡ[45]

ಕುಂದ= ಒಂದು ಜಾತಿಯ ಮಲ್ಲಿಗೆ, ಕೋಲುಮಲ್ಲಿಗೆ[46]

∴ಕುಂದ+ದ+ಊರು>ಕುಂದದಊರು>ಕುಂದದೂರು>ಕುಂದೂರು

∴ಬೆಟ್ಟದ ಸಮೀಪದ ನೆಲೆ, ಎತ್ತರದ ಸ್ಥಳದಲ್ಲಿರುವ ನೆಲೆ ಎಂದು ಅರ್ಥೈಸಬಹುದು.

**19.ಕೆಲ್ಲೋಡು**

ಶಾಸನಗಳಲ್ಲಿ ಕೆಲಗೋಡು[47] ಕೆಲ್ಲನಡು[48] ಎಂದು ಉಲ್ಲೇಖಗೊಂಡಿದೆ.

ಗೋಡು=ಒಂದು ಬಗೆಯ ಮಣ್ಣು; ಕೆರೆ, ಬಾವಿ,ಕೊಳ ಮುಂತಾದುವುಗಳಿಂದ ತೆಗೆದುಹಾಕಿರುವ ಸಾರವತ್ತಾದ ಹೂಳು ಮಣ್ಣು; ಒಂದು ಬಗೆಯ ಭೂಮಿ[49]

ಓಡ= ಸಣ್ಣತೊರೆ, ಹಳ್ಳ (< ತೆಲುಗು.ಓಡೈ)[50]

ಓಡ=ದೋಣಿ, ಹರಿಗೋಲು,ನಾವೆ[51]

ಎಲ್ಲೆ=ಮೇರೆ, ಸರಹದ್ದು,ಗಡಿ,ಅವಧಿ[52]

1. ಎಲ್ಲೆ+ಓಡು>ಎಲ್ಲೋಡು>ಕೆಲ್ಲೋಡು
2. ಕೆಳಗು+ಇನ+ಗೋಡು>ಕೆಳಗಿನಗೋಡು>ಕೆಳಗೋಡು>ಕೆಲಗೋಡು>ಕೆಲ್ಲೋಡು

∴ತೊರೆ ಅಥವಾ ನದಿಯ ಸರಹದ್ದು ಹೊಂದಿರುವ ನೆಲೆ, ನದಿಯ ಸಮೀಪದ ಫಲವತ್ತಾದ ಮಣ್ಣಿನ ನೆಲೆ ಎಂದು ಅರ್ಥೈಸಬಹುದು.

**20.ಕೈನಡು**

ಶಾಸನದಲ್ಲಿ ಕಹೆಗನೊಡ[53] ಎಂದು ಉಲ್ಲೇಖಗೊಂಡಿದೆ.

ಕೈಯ್ನೀಡು=ಕೈನೀಡು, ಕೈಚಾಚು, ನೆರವಾಗು ಆಶ್ರಯಕೊಡು[54]

∴ಕೈಯ್ನೀಡು+ನಾಡು>ಕೈಯ್ನೀಡುನಾಡು>ಕೈನಾಡು>ಕೈನಡು

∴ಬೇಡಿ ಬಂದ ಜನರಿಗೆ ಆಸರೆ ನೀಡುವ ನಾಡು ಎಂದು ಹೇಳಬಹುದು.

**21.ಕೊಂಡಜ್ಜಿ**

ಶಾಸನದಲ್ಲಿ ಕೊಂಡಂಜಿ[55] ಎಂದು ಉಲ್ಲೇಖಗೊಂಡಿದೆ.

ಕೊಂಡ= ಬೆಟ್ಟ,ದಿಣ್ಣೆ, ನೀರು ನಿಲ್ಲುವುದಕ್ಕಾಗಿ ಅಗೆದ ಕುಂಡ, ಕೆರೆ[56]

ಕೊಂಡಯ್ಯ=ಒಬ್ಬಾತನ ಹೆಸರು[57]

ಜೀಯ, ಜೀ, ಜೀಯ್ಯ=ಒಡೆಯ; ಪ್ರಭು; ದೇವ: ಜೀಯರ್, ಜಿಯ್ಯರ್, ಜೀಯರು=ಗುರುಗಳು;ಆಚಾರ್ಯರು[58]

∴ಕೊಂಡ+ಜೀಯ>ಕೊಂಡಜೀಯ>ಕೊಂಡಜೀ>ಕೊಂಡಂಜಿ>ಕೊಂಡಜ್ಜಿ

∴ಕೊಂಡ ಎಂಬ ಹಿರಿಯವ್ಯಕ್ತಿ ಅಥವಾ ಆಚಾರ್ಯರ ನೆಲೆ ಎಂದು ಅರ್ಥೈಸಬಹುದು.

**22.ಗರಗ**

ಶಾಸನದಲ್ಲಿ ಗರುಗ ಎಂದು ಉಲ್ಲೇಖಗೊಂಡಿದೆ.[59]

ಗರುಗ= ಗರಗ=ಗರಗು= ಒಂದು ಬಗೆಯ ಸಸ್ಯ, ಗರುಗದಗಿಡ, ಅಜಗರ[60]

∴ಗರುಗದ ಗಿಡವಿರುವ ನೆಲೆ ಎಂದು ಅರ್ಥೈಸಬಹುದು.

**23.ಗಂಜಿಕೆರೆ**

ಶಾಸನದಲ್ಲಿ ಗಂಜಿಗೇರ[61] ಎಂದು ಉಲ್ಲೇಖಗೊಂಡಿದೆ. ಮೊದಲು ನರಸಾಪುರ ಎಂಬ ಹೆಸರಿದ್ದು, ಗಂಜಿಗೇರ ಎಂದು ಮರುನಾಮಕರಣ ಮಾಡಿದ್ದು, ಪುನಃ ನರಸಾಪುರ ಎಂದು ಪುನರ್ನಾಮಕರಣವಾಗಿರುತ್ತದೆ. ಪ್ರಸ್ತುತ ಗಂಜಿಗೆರೆ ಎಂದೇ ಕರೆಯಲಾಗುತ್ತಿದೆ.

ಗಂಜಿ=ಗಂಚಿ, ಒಂದು ಬಗೆಯ ಗಿಡ, ಗುಲಗಂಜಿ[62]

1. ಗಂಚಿ+ಯ+ಕೆರೆ>ಗಂಚಿಯಕೆರೆ>ಗಂಚಿಕೆರೆ>ಗಂಜಿಕೆರೆ>ಗಂಜಿಗೆರೆ
2. ಗುಲಗಂಜಿ+ಯ+ಕೆರೆ>ಗುಲಗಂಜಿಯಕೆರೆ>ಗುಲಗಂಜಿಕೆರೆ>ಗಂಜಿಕೆರೆ> ಗಂಜಿಗೇರ>ಗಂಜಿಗೆರೆ

∴ಗುಲಗಂಜಿ ಸಸ್ಯ ಸಿಗುವ ಕೆರೆಯ ತಾಣ ಎಂದು ಅರ್ಥೈಸಬಹುದು.

**24.ಗುಡ್ಡದನೇರಲಕೆರೆ**

ಶಾಸನದಲ್ಲಿ ನೇರಿಲಗುಡ್ಡ[63]ಎಂದು ಉಲ್ಲೇಖಗೊಂಡಿದೆ

ನೇಱಿಲ್=ನೀರಲ, ನೇರಲು, ನೇರಲೆ, ನೇರಳೆ, ನೇರಿಲು, ನೇರಿಲೆ, ನೇರಿಳೆ, ನೇಱಳು, ನೇಱಲು, ನೇಱಲೆ ಒಂದು ಬಗೆಯ ಮರ ಮತ್ತು ಅದರ ಹಣ್ಣು.[64]

∴ಗುಡ್ಡ+ದ+ನೇರಲ+ಕೆರೆ>ಗುಡ್ಡದನೇರಲಕೆರೆ

∴ನೇರಳೆಯ ಮರಗಳಿರುವ ಗುಡ್ಡದ ನೆಲೆ ಎಂದು ಅರ್ಥೈಸಬಹುದು.

**25.ಗೊಲ್ಲರಹಳ್ಳಿ**

ಶಾಸನದಲ್ಲಿ ಗೊಲ್ಲರಹಳ್ಳಿ ಎಂದೇ ಉಲ್ಲೇಖಗೊಂಡಿದೆ.[65]

ಗೊಲ್ಲ=ಗೋಪಾಲಕ; ಗೋವಳ[66]

ಗೊಲ್ಲರಹಳ್ಳಿ=ಗೋವಳರು ವಾಸಿಸುವ ಗ್ರಾಮ[67]

ಗೊಲ್ಲರು=ಒಂದು ಸಮುದಾಯ

∴ಗೊಲ್ಲ+ರ+ಹಳ್ಳಿ>ಗೊಲ್ಲರಹಳ್ಳಿ

∴ಗೊಲ್ಲ ಸಮುದಾಯದ ನೆಲೆ ಎಂದು ಅರ್ಥೈಸಬಹುದು. ಇದೇ ಹೆಸರಿನ ಇನ್ನೊಂದು ಸ್ಥಳನಾಮ ಶ್ರೀರಾಂಪುರ ಹೋಬಳಿಯಲ್ಲಿದೆ.

**26.ಚನ್ನಸಮುದ್ರ**

ಶಾಸನದಲ್ಲಿ ಚಂನಸಮುದ್ರ ಎಂದು ಉಲ್ಲೇಖಗೊಂಡಿದೆ.[68]

ಚೆನ್ನ=ಚನ್ನ, ಸುಂದರನಾದವನು, ಚೆಲುವನಾದವನು[69]

ಚನ್ನಯ್ಯ=ಒಬ್ಬಾತನ ಹೆಸರು[70]

ಚನ್ನ=ವ್ಯಕ್ತಿವಾಚಕ

∴ಚನ್ನ+ನ+ಸಮುದ್ರ>ಚನ್ನನಸಮುದ್ರ>ಚನ್ನಸಮುದ್ರ

∴ಚನ್ನ ಎಂಬಾತ ನೆಲೆಸಿರುವ ಜಲಾಶಯದ ನೆಲೆ ಎಂದು ಅರ್ಥೈಸಬಹುದು.

**27.ಚಿಕ್ಕಬ್ಯಾಲದಕೆರೆ**

ಶಾಸನದಲ್ಲಿ ಬ್ಯಾಲದಕೆರೆ ಎಂದು ಉಲ್ಲೇಖಗೊಂಡಿದೆ.[71]

ಬೆಳಲ್=ಬೆಳಲ,ಬೆಳಲು,ಬೆಳವಲ,ಬೇಲ,ಬೇಳ,ಬೇಳಲು; ಒಂದು ಬಗೆಯ ಮರ ಮತ್ತು ಅದರ ಹಣ್ಣು[72]

∴ಬೇಲ+ದ+ಕೆರೆ>ಬೇಲದಕೆರೆ>ಬ್ಯಾಲದಕೆರೆ

∴ಬೇಲದ ಮರಗಳಿರುವ ಕೆರೆಯ ನೆಲೆ. ಒಂದು ಬ್ಯಾಲದಕೆರೆಯನ್ನು ಮತ್ತೊಂದು ಬ್ಯಾಲದಕೆರೆಯಿಂದ ಬೇರ್ಪಡಿಸಲು ಚಿಕ್ಕ ಎಂಬ ಉಪಆಕೃತಿಮಾ ಸೇರಿಸಲಾಗಿದೆ.

**28.ತಣಿಗೇಕಲ್ಲು**

ಶಾಸನದಲ್ಲಿ ತಣಿಗೆಯಕಲ್ಲು ಎಂದು ಉಲ್ಲೇಖಗೊಂಡಿದೆ.[73]

ತಳಿಗೆ=ತಣಿಗೆ;ತಟ್ಟೆ;ತಾಟು[74]

∴ತಳಿಗೆ+ಯ+ಕಲ್ಲು>ತಳಿಗೆಯಕಲ್ಲು>ತಣಿಗೆಯಕಲ್ಲು>ತಣಿಗೇಕಲ್ಲು

∴ತಟ್ಟೆಯ ಆಕಾರದ ಕಲ್ಲುಬಂಡೆಗಳಿರುವ ನೆಲೆ ಎಂದು ಅರ್ಥೈಸಬಹುದು.

**29.ತಂಡಗ**

ಶಾಸನದಲ್ಲಿ ತಣ್ಡಗ ಎಂದು ಉಲ್ಲೇಖಗೊಂಡಿದೆ[75]

ತಂಗಡಿ=ತಗಟೆ; ಅವರಿಕೆ ಗಿಡ[76]

ತಂಗಡಿ>ತಂಡಗ ವರ್ಣಪಲ್ಲಟವಾಗಿದೆ.

∴ತಂಗಡಿಯ ಸಸ್ಯದ ನೆಲೆ. ತಂಗಡಿ ವರ್ಣಪಲ್ಲಟಗೊಂಡು ತಂಡಗ ಎಂದಾಗಿದೆ.

**30.ತುಂಬಿನಕೆರೆ**

ಶಾಸನದಲ್ಲಿ ತುಂಬಿಕೆರೆ ಎಂದು ಉಲ್ಲೇಖಗೊಂಡಿದೆ.[77]

ತೂಂಬು= ತುಂಬು, ತೂಪು, ಕೆರೆ ಕಟ್ಟೆ ಮೊದಲಾದ ಜಲಾಶಯಗಳಲ್ಲಿ ನೀರು ಬಿಡಲು ಮಾಡಿರುವ ಕಂಡಿ, ದ್ವಾರ, ನೀರಗಂಡಿ[78]

∴ತುಂಬು+ಇನ+ಕೆರೆ= ತುಂಬಿನಕೆರೆ

∴ನೀರಗಂಡಿ ಇರುವ ಕೆರೆಯ ಹತ್ತಿರದ ನೆಲೆ ಎಂದು ಅರ್ಥೈಸಬಹುದು. ಇದೇ ಹೆಸರಿನ ಇನ್ನೊಂದು ಸ್ಥಳನಾಮ ಕಸಬಾ ಹೋಬಳಿಯಲ್ಲಿದೆ.

**31. ದೇವಿಗೆರೆ**

ಶಾಸನದಲ್ಲಿ ದೇವರಕೆಱೆ ಎಂದು ಉಲ್ಲೇಖಗೊಂಡಿದೆ.[79]

ದೇವ=ದೈವವಾಚಕ

∴ದೇವ+ರ+ಕೆಱೆ>ದೇವರಕೆಱೆ>ದೇವರಗೆರೆ>ದೇವಿಗೆರೆ

∴ದೇವರ ನೆಲೆ ಎಂದು ಅರ್ಥೈಸಬಹುದು.

**32. ದೊಡ್ಡಗಟ್ಟ**

ಶಾಸನದಲ್ಲಿ ದುಡುಗಟ್ಟ ಎಂದು ಉಲ್ಲೇಖಗೊಂಡಿದೆ.[80]

ದೊಡ್ಡ=ಗಾತ್ರದಲ್ಲಿ ಹಿರಿದಾದ; ದಪ್ಪವಾದ; ಸ್ಥೂಲವಾದ[81]

ಗಟ್ಟ=(ಸಂ<ಘಟ್ಟ)ಗಟ್ಟು;ಬೆಟ್ಟಗಳ ಸಾಲು;ಪರ್ವತಾವಳಿ[82]

∴ದೊಡ್ಡ+ಘಟ್ಟ>ದೊಡ್ಡಘಟ್ಟ>ದೊಡ್ಡಗಟ್ಟ

∴ಎತ್ತರದ ಬೆಟ್ಟಗುಡ್ಡಗಳ ಸಾಲಿನ ಸಮೀಪದಲ್ಲಿರುವ ಸ್ಥಳ ಎಂದು ಅರ್ಥೈಸಬಹುದು.

**33. ದೊಡ್ಡತೇಕಲವಟ್ಟಿ**

ಶಾಸನದಲ್ಲಿ ತೇಕುರವಟ್ಟಿ ಎಂದು ಉಲ್ಲೇಖಗೊಂಡಿದೆ[83]

ತೇಕಲ್= ಒಂದು ಊರಿನ ಹೆಸರು[84]

ದೇಕು, ಡೀಕು, ತೀಕು, ಡೇಕು, ದೇಗು, ದೋಕು= ತಗ್ಗಿ ಮುಂದುವರಿ; ಕುಳಿತುಕೊಂಡು ಜರುಗು, ಸರಿ[85]

∴ತೇಕಲ್+ಇನ+ಹಟ್ಟಿ>ತೇಕಲಿನಹಟ್ಟಿ>ತೇಕಲವಟ್ಟಿ

∴ತಗ್ಗಿನ ನೆಲೆ. ಒಂದು ತೇಕಲವಟ್ಟಿಯನ್ನು ಇನ್ನೊಂದು ತೇಕಲವಟ್ಟಿಯಿಂದ ಬೇರ್ಪಡಿಸಲು ದೊಡ್ಡ ಎಂಬ ಉಪ ಆಕೃತಿಮಾ ಸೇರಿ ದೊಡ್ಡ ತೇಕಲವಟ್ಟಿ ಎಂದಾಗಿದೆ.

**34. ನಾಗೇನಹಳ್ಳಿ**

ಶಾಸನದಲ್ಲಿ ನಾಗೇನಹಳ್ಳಿ ಎಂದೇ ಉಲ್ಲೇಖಗೊಂಡಿದೆ.[86]

ನಾಗಯ್ಯ=ಒಬ್ಬಾತನ ಹೆಸರು[87]

∴ನಾಗಯ್ಯ+ನ+ಹಳ್ಳಿ>ನಾಗಯ್ಯನಹಳ್ಳಿ>ನಾಗೇನಹಳ್ಳಿ

∴ನಾಗಯ್ಯ ಎಂಬ ವ್ಯಕ್ತಿ ಇರುವ ನೆಲೆ ಎಂದು ಅರ್ಥೈಸಬಹುದು.

**35.ನೀರುಗುಂದ**

ಶಾಸನಗಳಲ್ಲಿ ನೀರುಗುಂದ[88], ನಿರ್ಗುಂದ[89], ನೀರುಗುಂದ[90] ಎಂದು ಉಲ್ಲೇಖಗೊಂಡಿದೆ.

ನೀರ್ಗುಂದ-ನಿರ್ಗುಂದ-ನೀರುಗುಂದ- ಒಂದು ಸ್ಥಳನಾಮ[91]

∴ನೀರು+ಇನ+ಕುಂದ>ನೀರಿನಕುಂದ>ನೀರಿನಗುಂದ>ನೀರುಗುಂದ>ನೀರ ಗುಂದ

∴ನೀರು ಇರುವ ಎತ್ತರದ ನೆಲೆ ಎಂದು ಅರ್ಥೈಸಬಹುದು.

**36.ನೇರಲಕೆರೆ**

ಶಾಸನಗಳಲ್ಲಿ ನೇಱಲಕೆರೆ, ನೇಱಿಲಕೆರೆ ಎಂದು ಉಲ್ಲೇಖಗೊಂಡಿದೆ.[92]

ನೇಱಿಲ್=ನೀರಲ, ನೇರಲು, ನೇರಳೆ, ನೇರಿಲು, ನೇರಿಳೆ, ನೇಱಳು, ನೇಱಲು,

ನೇಱಲೆ ಒಂದು ಬಗೆಯ ಮರ ಮತ್ತು ಅದರ ಹಣ್ಣು[93]

∴ನೇರಲ+ಕೆರೆ>ನೇರಲಕೆರೆ

∴ನೇರಳೆಯ ಮರವಿರುವ ಕೆರೆಯ ಸನಿಹದ ನೆಲೆ ಎಂದು ಅರ್ಥೈಸಬಹುದು.

**37. ಬಲ್ಲಾಳಸಮುದ್ರ**

ಶಾಸನದಲ್ಲಿ ಬಲ್ಲಾಳಸಮುದ್ರ ಎಂದೇ ಉಲ್ಲೇಖಗೊಂಡಿದೆ.[94]

ಬಲ್ಲಾಳ=ಅರಸನ ಕೈಕೆಳಗಿನ ಒಬ್ಬ ಅಧಿಕಾರಿ[95]

ಬಲ್ಲಾಳ=ವ್ಯಕ್ತಿವಾಚಕ

∴ಬಲ್ಲಾಳ+ನ+ಸಮುದ್ರ>ಬಲ್ಲಾಳನಸಮುದ್ರ>ಬಲ್ಲಾಳಸಮುದ್ರ

∴ಬಲ್ಲಾಳ ಎಂಬ ವ್ಯಕ್ತಿಯ ಹೆಸರಿನ ಜಲಾಶಯದ ನೆಲೆ. ಈ ಪ್ರದೇಶವನ್ನು ಆಳುತ್ತಿದ್ದ ಬಲ್ಲಾಳನ ನೆನಪಿಗೆ ಮರುನಾಮಕರಣ ಮಾಡಿರಬಹುದು.

**38.ಬಾಗೂರು**

ಶಾಸನಗಳಲ್ಲಿ ಬಾಗೂರಸೀಮೆ[96],ಬಾಗೂರು[97],ಭಾಗ್ಯಪುರ[98] ಎಂದು ಉಲ್ಲೇಖಗೊಂಡಿದೆ.

ಭಾಗ=ಹಂಚಿಕೆ,ವಿಭಾಗ,ದೆಸೆ,ದಿಕ್ಕು,ಕೆಲವು ಗ್ರಾಮಗಳ ಗುಂಪು,ಪ್ರಾಂತ,ಆಡಳಿತಕ್ಕಾಗಿ ಮಾಡಿರುವ ನಾಡಿನ ವಲಯ[99]

∴ಬಾಗ+ಊರು>ಬಾಗೂರು

∴ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡಿರುವ ನಾಡಿನ ಒಂದು ವಲಯ ಅಥವಾ ಪ್ರಾಂತದ ಮುಖ್ಯ ಊರು.ಐತಿಹಾಸಿಕ ಹಿನ್ನಲೆ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವ ಬಾಗೂರು ಗ್ರಾಮವು ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಭಾಗ್ಯಪುರ ಎಂದು ಕರೆಯಲ್ಪಡುತ್ತಿದ್ದು;ಪ್ರಾಂತದ ರಾಜಧಾನಿಯಾದ ನಂತರದಲ್ಲಿ ಪ್ರಾಂತದ ಮುಖ್ಯ ಸ್ಥಳವನ್ನಾಗಿ ಗುರುತಿಸಲ್ಪಟ್ಟಿದ್ದರಿಂದ ಬಾಗೂರು ಎಂದಾಗಿರಬಹುದು.

**39. ಬೆಲಗೂರು**

ಶಾಸನಗಳಲ್ಲಿ ಬೆಲಗೂರು ಎಂದು ಉಲ್ಲೇಖಗೊಂಡಿದೆ[100]

ಬೆಲಗ= ಒಂದು ಬಗೆಯ ಸಸ್ಯ. ಹಸರುಗನ್ನಿ, ಬಿಳಿಬೀಟೆ, ಬೆಟ್ಟದ ಹಸುರುಗೋಣಿ[101]

ಬೆಲಗು= ಭಾವಣಿಗೆ ಹಾಕುವ ಅಡ್ಡತೊಲೆ[102]

∴ ಬೆಲಗು+ಊರು>ಬೆಲಗೂರು

∴ಬಿಳಿಬೀಟೆಯ ಮರದ ನೆಲೆ ಎಂದು ಅರ್ಥೈಸಬಹುದು.

**40.ಬೇವಿನಹಳ್ಳಿ**

ಶಾಸನದಲ್ಲಿ ಬೇವಿನಹಳ್ಳಿ ಎಂದೇ ಉಲ್ಲೇಖಗೊಂಡಿದೆ.[103]

ಬೇವು=ಸಸ್ಯವಾಚಕ

∴ಬೇವು+ಇನ+ಹಳ್ಳಿ>ಬೇವಿನಹಳ್ಳಿ

∴ಬೇವಿನಮರಗಳಿರುವ ಅರಣ್ಯದ ನೆಲೆ ಎಂದು ಅರ್ಥೈಸಬಹುದು. ಇದೇ ಹೆಸರಿನ ಇನ್ನೊಂದು ಸ್ಥಳನಾಮ(ಮಜರೆಗ್ರಾಮ) ಬಲ್ಲಾಳಸಮುದ್ರಕಾವಲ್ ಸನಿಹದಲ್ಲಿದೆ.

**41.ಮತ್ತೋಡು**

ಶಾಸನಗಳಲ್ಲಿ ಮತ್ತನಡು[104],ಮತ್ತಿನಡು[105],ಮತ್ತೇಡು[106] ಎಂದು ಉಲ್ಲೇಖಗೊಂಡಿದೆ.

**42.ಮಧುರೆ**

ಶಾಸನದಲ್ಲಿ ಮಧುರೆ ಎಂದೇ ಉಲ್ಲೇಖಗೊಂಡಿದೆ.[107]

ಮಧುರೆ=1. ಒಂದು ಬಗೆಯ ಸಸ್ಯ; ಕಾಡುಸಬ್ಬಸಿಗೆ; ಉತ್ತರಭಾರತದ ಮಥುರಾಪಟ್ಟಣ; ಶ್ರೀಕೃಷ್ಣನ ಜನ್ಮಸ್ಥಳ[108]

ಮದುರೆ,ಮದಿರೆ,ಮಧುರೆ=ಹಿಂದೆ ಪಾಂಡ್ಯರ ರಾಜಧಾನಿಯಾಗಿದ್ದ ಒಂದು ಊರಿನ ಹೆಸರು[109]

ಮದುರೆಗಿಳ್=ಒಂದು ಊರಿನ ಹೆಸರು[110]

∴ಕಾಡು ಸಬ್ಬಸಿಗೆ ಸಸ್ಯದ ನೆಲೆ.

**43.ಮಳಲಿ**

ಶಾಸನದಲ್ಲಿ ಮಣಲಿ ಎಂದು ಉಲ್ಲೇಖಗೊಂಡಿದೆ.[111]

ಮಣಲ್-ಮಣಲು-ಮರಳು-ಮಲರ್-ಮಳಲ್-ಮಳಲು:

ಮಣಲಿ=ಒಂದು ಊರಿನ ಹೆಸರು; ಮಣಲ್ದಾಣ=ಮರಳಿರುವ ಸ್ಥಳ;ಪುಳಿನ ಸ್ಥಳ[112]

∴ಮಣಲ್>ಮಣಲು>ಮಳಲು>ಮಳಲಿ

∴ಮರಳುಭೂಮಿಯ ಎತ್ತರದ ನೆಲೆ ಎಂದು ಅರ್ಥೈಸಬಹುದು.

**44.ಮಾಡದಕೆರೆ**

ಶಾಸನದಲ್ಲಿ ಮಾದಕೆರೆ ಎಂದು ಉಲ್ಲೇಖಗೊಂಡಿದೆ.[113]

ಮಾದಪ್ಪ=ಒಬ್ಬಾತನ ಹೆಸರು[114]

∴ಮಾದಪ್ಪ+ನ+ಕೆಱೆ>ಮಾದಪ್ಪನಕೆಱೆ>ಮಾದನಕೆಱೆ>ಮಾಡದಕೆರೆ

∴ಮಾದಪ್ಪ ಎಂಬುವನು ಕಟ್ಟಿಸಿದ ಕೆರೆ ಅಥವಾ ಮಾದಪ್ಪ ಎಂಬಾತನಿರುವ ಕೆರೆಯ ಸನಿಹದ ನೆಲೆ ಎಂದು ಅರ್ಥೈಸಬಹುದು.

**45. ಮಾರಗೊಂಡನದಿಬ್ಬ**

ಶಾಸನದಲ್ಲಿ ಮಾರಗೊಂಡನಹಳ್ಳ ಎಂದು ಉಲ್ಲೇಖಗೊಂಡಿದೆ.[115]

ಮಾರ= ವ್ಯಕ್ತಿವಾಚಕ

∴ಮಾರ+ಗೌಂಡ+ನ+ದಿಬ್ಬ>ಮಾರಗೌಂಡನದಿಬ್ಬ>ಮಾರಗೊಂಡನದಿಬ್ಬ

∴ ಮಾರ ಎಂಬ ಗೌಡನಿರುವ ಎತ್ತರದ ನೆಲೆ.

**46. ಮೆಟ್ಟಿನಹೊಳೆ**

ಶಾಸನದಲ್ಲಿ ಶ್ರೀಮೆಟ್ಟಿನಹೊಳೆ ಎಂದು ಉಲ್ಲೇಖಗೊಂಡಿದೆ.[116]

ಪೊಟೆ-ಪೊಳೆ-ಹೊಳೆ=ನದಿ,ತೊರೆ,ಹಳ್ಳ[117]

ಪೊಟೆಮೆಟ್ಟು=ಹೊಳೆಮೆಟ್ಟು=ಹೊಳೆಯ ನೀರನ್ನು ಪೂಜಿಸುವುದಕ್ಕಾಗಿ ನೀರಿನಲ್ಲಿ ಇಳಿ, ಬಾಣಂತಿಯು ಸೂತಿಕಾಗೃಹದಿಂದ ಈಚೆಗೆ ಬರುವ ದಿನ ಹೊಳೆಯ ನೀರಿನ ಬಳಿ ಸ್ನಾನಮಾಡಿ ಗಂಗೆಯನ್ನು ಪೂಜಿಸಿ ಬರುವ ಪದ್ಧತಿಯಿತ್ತು. ಹಾಗೂ ಇದೊಂದು ಪವಿತ್ರೀಕರಣವಿಧಿಯಾಗಿತ್ತು. ಇಟೆದೊಡೆ ಕೂರದ ಪೆಂಡಿರ ಕೆಟನಾದಪೆವೆಂದು ರತ್ನಸೋಪಾನಕದೊಳ್ ಗಟಗಟನಿಟೆಯದೆ ಬಾಣತಿಪೊಟೆಮೆಟ್ಟುವ ತೆಱದೆ ಗುಜ್ಜುಮೆಟ್ಟಿದರೆಬರ್(ಅನ.ಪು7-34)[118]

∴ಪೊಟೆ+ಯ+ಮೆಟ್ಟು>ಪೊಟೆಯಮೆಟ್ಟು>ಪೊಟೆಮೆಟ್ಟು>ಮೆಟ್ಟಿನಪೊಟೆ>ಮೆಟ್ಟಿನಹೊಳೆ

∴ಮೆಟ್ಟಲು+ಇನ+ಪೊಟೆ>ಮೆಟ್ಟಲಿನಪೊಟೆ>ಮೆಟ್ಟಿನಪೊಳೆ>ಮೆಟ್ಟಿನಹೊಳೆ

∴ಹೊಳೆಮೆಟ್ಟು ಆಚರಣೆ ಮಾಡುವ ಹೊಳೆಯ ಸನಿಹದ ನೆಲೆ, ಮೆಟ್ಟಿಲುಗಳಿರುವ ಹೊಳೆಯ ಸಮೀಪದ ನೆಲೆ ಎಂದು ಅರ್ಥೈಸಬಹುದು.

**47.ಮೆಣಸಿನಡು**

ಶಾಸನದಲ್ಲಿ ಮೇಣಸಿನಡು ಎಂದು ಉಲ್ಲೇಖಗೊಂಡಿದೆ.[119]

ಮೆಟಸು=ಮೆಣಸು,ಮೆಳಸು,ಮೆಳಸು;1. ಒಂದು ಬಗೆಯ ಬಳ್ಳಿ ಮತ್ತು ಸಂಭಾರಕ್ಕೆ ಉಪಯೋಗವಾಗುವ ಕಾರವಾದ ಅದರ ಕಪ್ಪುಕಾಳು 2.ಒಂದು ಬಗೆಯ ಗಿಡ ಮತ್ತು ಹಸಿಯಾಗಿಯೂ ಒಣಗಿಸಿಯೂ ಅಡುಗೆಗೆ ಬಳಸುವ ಕಾರವಾಗಿರುವ ಅದರ ಕಾಯಿ[120]

∴ಮೆಣಸು+ಇನ+ನಾಡು>ಮೆಣಸಿನನಾಡು>ಮೆಣಸಿನಡು

∴ಮೆಣಸು ಬೆಳೆಯುವ ನೆಲೆ ಎಂದು ಅರ್ಥೈಸಬಹುದು.

**48.ಶ್ರೀರಂಗಪುರ**

ಶಾಸನದಲ್ಲಿ ಸಿರಗಪುರ ಎಂದು ಉಲ್ಲೇಖಗೊಂಡಿದೆ.[121]

ಶ್ರೀರಂಗ=ವಿಷ್ಣುವಿನ ಹೆಸರುಗಳಲ್ಲಿ ಒಂದು.[122] ದೈವವಾಚಕ

∴ಶ್ರೀರಂಗ+ನ+ಪುರ>ಶ್ರೀರಂಗನಪುರ>ಶ್ರೀರಂಗಪುರ

∴ಶ್ರೀರಂಗ ದೈವದ ನೆಲೆ ಅಥವಾ ಶ್ರೀರಂಗ ದೈವದ ನೆನಪಿಗಾಗಿ ಮರುನಾಮಕರಣ ಮಾಡಿರಬಹುದು. ಇದೇ ಹೆಸರಿನ ಇನ್ನೊಂದು ಸ್ಥಳನಾಮವಿದ್ದು, ಇದರಿಂದ ಬೇರ್ಪಡಿಸಲು ಜೋಡಿ ಎಂಬ ಉಪ ಆಕೃತಿಮಾ ಸೇರಿ ಜೋಡಿಶ್ರೀರಂಗಪುರ ಎಂದಾಗಿದೆ.

**49.ಶ್ರೀರಾಮಪುರ**

ಶಾಸನಗಳಲ್ಲಿ ಬೂದಿಹಾಳ ಸೀಮೆ[123] ಬೂದಿಹಾಳ[124] ಎಂದು ಉಲ್ಲೇಖಗೊಂಡಿದೆ. ಇದು ಪುನರ್ನಾಮಕರಣಗೊಂಡ ಸ್ಥಳನಾಮ. ಈ ಮೊದಲು ಬೂದಿಹಾಳು ಎಂದು ಕರೆಯಲ್ಪಡುತ್ತಿತ್ತು.

ಬೂದಿ=ಬೂದ,ಬೂದು;ಗೋವಿನ ಸಗಣಿಯನ್ನು ಒಣಗಿಸಿ ತುಷಾಗ್ನಿಯಲ್ಲಿ ಸುಟ್ಟು ಸಂಸ್ಕರಿಸಿದ ಪುಡಿ;ವಿಭೂತಿ;ಭಸ್ಮ[125]

ಪಾೞ್- ಪಾಳ್- ಪಾೞು- ಪಾೞು- ಹಾಳ್- ಹಾಳ- ಹಾಳು- ಹಾೞು= ಶೂನ್ಯವಾದುದು; ನಿರರ್ಥಕವಾದುದು; ಬೀಳುಬಿದ್ದುದು; ಹಾಳು ಬಿದ್ದಜಾಗ; ಬೀಳು ಬಿದ್ದ ಸ್ಥಳ[126]

∴ಬೂದಿ+ಯ+ಪಾೞು>ಬೂದಿಯಪಾೞು>ಬೂದಿಯಹಾಳು>ಬೂದಿಹಾಳು

∴ಬೂದಿ ಬಣ್ಣದ ಮಣ್ಣಿನ ಸಾಗುವಳಿ ಮಾಡದ ಜಮೀನಿನ ನೆಲೆ ಎಂದು ಅರ್ಥೈಸಬಹುದು.

ಬೂದಿಹಾಳು ಎಂಬುದು ಶ್ರೀರಾಮಪುರ ಎಂದು ಪುನರ್ನಾಮಕರಣಗೊಂಡಿದೆ.

∴ಶ್ರೀರಾಮ+ನ+ಪುರ>ಶ್ರೀರಾಮನಪುರ>ಶ್ರೀರಾಮಪುರ>ಶ್ರೀರಾಂಪುರ

**50.ಸಿರಗೊಂಡನಹಳ್ಳಿ**

ಶಾಸನದಲ್ಲಿ ಶಿರೀಗೊಂಡಿಹಳ್ಳಿ ಎಂದು ಉಲ್ಲೇಖಗೊಂಡಿದೆ.[127]

ಸಿರಿಯಪ್ಪ=ವ್ಯಕ್ತಿವಾಚಕ

∴ಸಿರಿ+ಅಪ್ಪ+ಗೌಂಡ+ನ+ಹಳ್ಳಿ>ಸಿರಿಯಪ್ಪಗೌಂಡನಹಳ್ಳಿ>ಸಿರಿಗೌಂಡನಹಳ್ಳಿ>ಸಿರಿಗೊಂಡನಹಳ್ಳಿ>ಸಿರಗೊಂಡನಹಳ್ಳಿ

∴ಸಿರಿಯಪ್ಪ ಎಂಬ ಧನಿಕನ ನೆಲೆ ಎಂದು ಅರ್ಥೈಸಬಹುದು.

**51.ಹುಣವಿನಡು (ಹುಣವೀನಾಡು)**

ಶಾಸನದಲ್ಲಿ ಹೂಳಿಗನೊಡವಿ ಎಂದು ಉಲ್ಲೇಖಗೊಂಡಿದೆ.[128]

ಪೂೞ್,ಪೂಣ್,ಪೂಳ್,ಪೂಳು,ಹೂಣು, ಹೂಳ್,ಹೂಳು= ತಗ್ಗು, ಕುಳಿ, ಬಾವಿ ಮೊದಲಾದವುಗಳನ್ನು ಮಣ್ಣು ಕಲ್ಲು ಮೊದಲಾದವುಗಳಿಂದ ತುಂಬು, ಮುಚ್ಚು (ಕಸಾಪ.ನಿಘಂಟು)

∴ಹೂಳ್+ಇಗ+ನಾಡು>ಹೂಳಿಗನಾಡು>ಹೂಣಿಗನಾಡು>ಹುಣವಿನಾಡು> ಹುಣವಿನಡು

∴ತಗ್ಗಿನ ನೆಲೆ ಎಂದು ಅರ್ಥೈಸಬಹುದು.

**52. ಹೆಗ್ಗೆರೆ**

ಶಾಸನಗಳಲ್ಲಿ ಹೆಗ್ಗೆಱೆ ಎಂದು ಉಲ್ಲೇಖಗೊಂಡಿದೆ.[129]

ಪೆರ್ಗೆಱೆ,ಹೆಗ್ಗೆರೆ,ಹೆಗ್ಗೆಱೆ,ಹೆರ್ಗೆಱೆ=ದೊಡ್ಡಕೆರೆ,ತಟಾಕ[130]

∴ಪರಿದು+ಕೆಱೆ>ಪೆರ್ಗೆಱೆ>ಹೆರ್ಗೆಱೆ>ಹೆಗ್ಗೆಱೆ>ಹೆಗ್ಗೆರೆ

∴ದೊಡ್ಡ ಕೆರೆಯ ನೆಲೆ ಎಂದು ಅರ್ಥೈಸಬಹುದು.

**53.ಹೆಬ್ಬಳ್ಳಿ**

ಶಾಸನಗಳಲ್ಲಿ ಪೆರ್ವ್ವಳ್ಳಿ[131],ಪೆರ್ಬ್ಬಳ್ಳಿ[132] ಎಂದು ಉಲ್ಲೇಖಗೊಂಡಿದೆ.

ಪೆರ್ವಳ್ಳಿ,ಪೆರ್ಬಳ್ಳಿ=ಒಂದು ಸ್ಥಳದ ಹೆಸರು[133]

∴ಪೆರ್>ಪಿರಿದು+ಪಳ್ಳಿ+ಪೆರ್ವಳ್ಳಿ>ಪೆರ್ಬಳ್ಳಿ>ಹೆರ್ಬಳ್ಳಿ>ಹೆಬ್ಬಳ್ಳಿ

∴ಸುತ್ತಮುತ್ತಲಿನ ಹಳ್ಳಿಗಳಲ್ಲೇ ಹಿರಿದಾದ ಹಳ್ಳಿಯ ನೆಲೆ ಎಂದು ಅರ್ಥೈಸಬಹುದು.

**54.ಹೊನ್ನೆಕೆರೆ**

ಶಾಸನಗಳಲ್ಲಿ ಹೊಂನ್ನೆಯಕೆಱೆ ಎಂದು ಉಲ್ಲೇಖಗೊಂಡಿದೆ.[134]

ಹೊನ್ನಯ್ಯ=ವ್ಯಕ್ತಿವಾಚಕ

∴ಹೊನ್ನಯ್ಯ+ನ+ಕೆಱೆ>ಹೊನ್ನಯ್ಯನಕೆಱೆ>ಹೊಂನ್ನೆಯಕೆಱೆ>ಹೊನ್ನೆಕೆರೆ

∴ಹೊನ್ನಯ್ಯ ಎಂಬಾತನಿರುವ ಕೆರೆಯ ಸನಿಹದ ನೆಲೆ.

**ಸಮಾರೋಪ**

ಪ್ರಸ್ತುತ ಅಧ್ಯಯನದಲ್ಲಿ ಹೊಸದುರ್ಗ ತಾಲೂಕಿನ ಐವತ್ನಾಲ್ಕು ಶಾಸನೋಕ್ತ ಸ್ಥಳನಾಮಗಳ ಭಾಷಿಕ ನೆಲೆಯ ನಿಷ್ಪತ್ತಿ ನಿರ್ಣಯ ಮಾಡಲು ಪ್ರಯತ್ನಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿತಗೊಂಡ ಸ್ಥಳನಾಮದ ಪದರೂಪ ಮತ್ತು ಆನಂತರದಲ್ಲಿ ಆದ ಭಾಷಿಕ ಪಲ್ಲಟಗಳನ್ನು ಪರಿಶೀಲಿಸಿ ಸ್ಥಳನಾಮವನ್ನು ಪರಿಚಯಿಸಲಾಗಿದೆ. ಈ ಅಧ್ಯಯನವು ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ಗುರುತಿಸಿದೆ. ಅದರಲ್ಲಿ ಹೊಸದುರ್ಗ ತಾಲೂಕಿನ ಎಲ್ಲ ಶಾಸನಗಳನ್ನು ಭಾಷಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ನಡೆಯಬೇಕಾಗಿದೆ ಮತ್ತು ಸ್ಥಳನಾಮಗಳಲ್ಲಿನ ಪರಿವರ್ತನೆಯ ಅಧ್ಯಯನ ಅಗತ್ಯ ಎಂಬುದನ್ನು ಸಹ ಪ್ರಸ್ತುತ ಅಧ್ಯಯನ ಗುರುತಿಸಿದೆ.

**ಕೊನೆಟಿಪ್ಪಣಿಗಳು**

1. ಎಂ.ಎಂ.ಕಲಬುರ್ಗಿ, ಮಾರ್ಗ, ಸಂಪುಟ-2 ಪುಟ.534
2. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 96 ಕಾಲ 1736
3. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.87
4. ಸಂಸ್ಕೃತ ಪದ
5. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 132 ಕಾಲ 1533
6. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.134
7. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 102,103 ಕಾಲ 1681
8. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.189
9. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 7 ಪುಟ.7452
10. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 113 ಕಾಲ 1556
11. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.379
12. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 120 ಕಾಲ 1240
13. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 134 ಕಾಲ ?
14. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.625
15. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 7ಪುಟ.7116

16. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 101 ಕಾಲ 1707
17. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.545
18. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 128 ಕಾಲ 1505, 129 ಕಾಲ?
19. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ 1 ಪುಟ.666-669
20. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 132 ಕಾಲ 1533
21. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.1375,1377
22. ಅದೇ ಪುಟ.1376
23. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 12 ಕಾಲ 1137
24. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.1406
25. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 96 ಕಾಲ 1736
26. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.1404
27. ಅದೇ ಪುಟ. 1350
28. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 17, ಕಾಲ 1215
29. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 20, ಕಾಲ 1188
30. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.1404
31. ಅದೇ
32. ಅದೇ ಪುಟ. 1574
33. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 125 ಕಾಲ 1535
34. ತಾಮ್ರಶಾಸನ
35. ಎಫಿಗ್ರಾಫಿಯ ಕರ್ನಾಟಿಕ ಸಂ. 9 ಶಾಸನ ಸಂಖ್ಯೆ 112 ಕಾಲ 1554, 113 ಕಾಲ1556, 114 ಕಾಲ 1552
36. ಅದೇ ಶಾಸನ ಸಂಖ್ಯೆ 112 ಕಾಲ 1554
37. ಪೂರ್ವೋಕ್ತ
38. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 96 ಕಾಲ 1736
39. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.1739
40. ಅದೇ
41. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 132ಕಾಲ 1533
42. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪುಟ2 ಪುಟ.2105
43. ಎಫಿಗ್ರಾಫಿಯ ಕರ್ನಾಟಿಕ ಸಂಪುಟ 9 ಹೊಳಲ್ಕೆರೆ ತಾಲೂಕು ಶಾಸನ ಸಂಖ್ಯೆ 94ಕಾಲ 1511
44. ಅದೇ ಶಾಸನ ಸಂಖ್ಯೆ 113 ಕಾಲ 1556, ಶಾಸನ ಸಂಖ್ಯೆ 121 ಕಾಲ 1240
45. ಕಸಾಪ ನಿಘಂಟು ಸಂ.2 ಪುಟ.1884
46. ಅದೇ ಪುಟ.1885
47. ಎ.ಕ.ಸಂ.9 ಶಾಸನ ಸಂಖ್ಯೆ 92
48. ಎ.ಕ.ಸಂ.9 ಶಾಸನ ಸಂಖ್ಯೆ 132
49. ಕಸಾಪ ನಿಘಂಟು ಸಂ.3 ಪುಟ.2631
50. ಕಸಾಪ ನಿಘಂಟು ಸಂ.1 ಪುಟ.1297
51. ಅದೇ
52. ಅದೇ ಪುಟ.1108
53. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 13 ಕಾಲ 1181
54. ಕಸಾಪ ನಿಘಂಟು ಸಂ.2 ಪುಟ.2076
55. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 121 ಕಾಲ 1240
56. ಕಸಾಪ ನಿಘಂಟು ಸಂ.2 ಪುಟ.2153
57. ಅದೇ ಪುಟ. 2154
58. ಕಸಾಪ ನಿಘಂಟು ಸಂ.3 ಪುಟ.3070
59. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಚಿಕ್ಕನಾಯ್ಕನಹಳ್ಳಿ ತಾಲೂಕು ಶಾಸನ ಸಂಖ್ಯೆ 19 ಕಾಲ 1636
60. ಕಸಾಪ ನಿಘಂಟು ಸಂ.2 ಪುಟ.2431
61. ಎ.ಕ.ಸಂ.9 ಶಾಸನ ಸಂಖ್ಯೆ 96
62. ಕಸಾಪ ನಿಘಂಟು ಸಂ.2 ಪುಟ.2356
63. ಎ.ಕ.ಸಂ.9 ಶಾಸನ ಸಂಖ್ಯೆ 94
64. ಕಸಾಪ ನಿಘಂಟು ಸಂ.5 ಪುಟ.4984
65. ಎ.ಕ.ಸಂ.9 ಶಾಸನ ಸಂಖ್ಯೆ 94
66. ಕಸಾಪ ನಿಘಂಟು ಸಂ.3 ಪುಟ.2623
67. ಅದೇ
68. ಎ.ಕ.ಸಂ.9 ಶಾಸನ ಸಂಖ್ಯೆ 132
69. ಕಸಾಪ ನಿಘಂಟು ಸಂ.3 ಪುಟ.2884
70. ಅದೇ ಪುಟ.2752
71. ಮತ್ತೋಡು ತಾಮ್ರಶಾಸನ
72. ಕಸಾಪ ನಿಘಂಟು ಸಂ.7 ಪುಟ.6599
73. ಎ.ಕ.ಸಂ.9 ಶಾಸನ ಸಂಖ್ಯೆ 42
74. ಕಸಾಪ ನಿಘಂಟು ಸಂ.3 ಪುಟ.3386
75. ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 18

76. ಕಸಾಪ ನಿಘಂಟು ಸಂ.3 ಪುಟ.3203
77. ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 10
78. ಕಸಾಪ ನಿಘಂಟು ಸಂ.4 ಪುಟ.3579
79. ಎ.ಕ.ಸಂ.9 ಶಾಸನ ಸಂಖ್ಯೆ 124
80. ಎ.ಕ.ಸಂ.9 ಶಾಸನ ಸಂಖ್ಯೆ 107
81. ಕಸಾಪ ನಿಘಂಟು ಸಂ.4 ಪುಟ.4095
82. ಕಸಾಪ ನಿಘಂಟು ಸಂ.2 ಪುಟ.2389
83. ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 14
84. ಕಸಾಪ ನಿಘಂಟು ಸಂ.4 ಪುಟ.3635
85. ಕಸಾಪ ನಿಘಂಟು ಸಂ.4 ಪುಟ.4047
86. ಎ.ಕ.ಸಂ.9 ಶಾಸನ ಸಂಖ್ಯೆ 113
87. ಕಸಾಪ ನಿಘಂಟು ಸಂ.4 ಪುಟ.4454
88. ಎ.ಕ.ಸಂ.9 ಶಾಸನ ಸಂಖ್ಯೆ 118, 121, 122, 136
89. ಎ.ಕ.ಸಂ.9 ಶಾಸನ ಸಂಖ್ಯೆ 104
90. ಎ.ಕ.ಸಂ.9 ಶಾಸನ ಸಂಖ್ಯೆ 132
91. ಕಸಾಪ ನಿಘಂಟು ಸಂ.5 ಪುಟ.4823
92. ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 06
93. ಕಸಾಪ ನಿಘಂಟು ಸಂ.5 ಪುಟ.4984
94. ಎ.ಕ.ಸಂ.9 ಶಾಸನ ಸಂಖ್ಯೆ 126, 127
95. ಕಸಾಪ ನಿಘಂಟು ಸಂ.6 ಪುಟ.6298
96. ಎ.ಕ.ಸಂ.9 ಶಾಸನ ಸಂಖ್ಯೆ 112
97. ಎ.ಕ.ಸಂ.9 ಶಾಸನ ಸಂಖ್ಯೆ 108, 110, 111, 114, 119, 128
98. ಎ.ಕ.ಸಂ.9 ಶಾಸನ ಸಂಖ್ಯೆ 113, 115
99. ಕಸಾಪ ನಿಘಂಟು ಸಂ.7 ಪುಟ.6723
100. ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 06, 27
101. ಕಸಾಪ ನಿಘಂಟು ಸಂ.7 ಪುಟ.6586
102. ಅದೇ
103. ಎ.ಕ.ಸಂ.9 ಶಾಸನ ಸಂಖ್ಯೆ 121
104. ಎ.ಕ.ಸಂ.9 ಶಾಸನ ಸಂಖ್ಯೆ 101
105. ಎ.ಕ.ಸಂ.9 ಶಾಸನ ಸಂಖ್ಯೆ 96, 98, 99
106. ಎ.ಕ.ಸಂ.9 ಶಾಸನ ಸಂಖ್ಯೆ 96
107. ಎ.ಕ.ಸಂ.9 ಶಾಸನ ಸಂಖ್ಯೆ 113
108. ಕಸಾಪ ನಿಘಂಟು ಸಂ.7 ಪುಟ.6910
109. ಕಸಾಪ ನಿಘಂಟು ಸಂ.7 ಪುಟ.6901
110. ಅದೇ
111. ಎ.ಕ.ಸಂ.9 ಶಾಸನ ಸಂಖ್ಯೆ 130, 131
112. ಕಸಾಪ ನಿಘಂಟು ಸಂ.7 ಪುಟ.6873
113. ಎ.ಕ.ಸಂ.9 ಶಾಸನ ಸಂಖ್ಯೆ 107
114. ಕಸಾಪ ನಿಘಂಟು ಸಂ.7 ಪುಟ.7059
115. ಎ.ಕ.ಸಂ.9 ಶಾಸನ ಸಂಖ್ಯೆ 132
116. ಎ.ಕ.ಸಂ.9 ಶಾಸನ ಸಂಖ್ಯೆ 132
117. ಕಸಾಪ ನಿಘಂಟು ಸಂ.6 ಪುಟ.5987
118. ಅದೇ
119. ಎ.ಕ.ಸಂ.9 ಶಾಸನ ಸಂಖ್ಯೆ 96
120. ಕಸಾಪ ನಿಘಂಟು ಸಂ.7 ಪುಟ.7395
121. ಎ.ಕ.ಸಂ.9 ಶಾಸನ ಸಂಖ್ಯೆ 90
122. ಕಸಾಪ ನಿಘಂಟು ಸಂ.8 ಪುಟ.8171
123. ಎ.ಕ.ಚಿನಾಹ. ಶಾಸನ ಸಂಖ್ಯೆ 05, 06, 07, 08, 10, 22
124. ಅದೇ ಶಾಸನ ಸಂಖ್ಯೆ 06, 10, 17, 26
125. ಕಸಾಪ ನಿಘಂಟು ಸಂ.7 ಪುಟ.6549
126. ಕಸಾಪ ನಿಘಂಟು ಸಂ.6 ಪುಟ.5577
127. ಎ.ಕ.ಸಂ.9 ಶಾಸನ ಸಂಖ್ಯೆ 96
128. ಎ.ಕ.ಸಂ.9 ಶಾಸನ ಸಂಖ್ಯೆ 104
129. 129.ಎ.ಕ.ಚಿನಾಹಳ್ಳಿ ಶಾಸನ ಸಂಖ್ಯೆ 06, 21, 22, 24, 25, 26, 27
130. ಕಸಾಪ ನಿಘಂಟು ಸಂ.6 ಪುಟ.5816
131. ಎ.ಕ.ಸಂ.9 ಶಾಸನ ಸಂಖ್ಯೆ 85, 86
132. ಎ.ಕ.ಸಂ.9 ಶಾಸನ ಸಂಖ್ಯೆ 88
133. ಕಸಾಪ ನಿಘಂಟು ಸಂ.6 ಪುಟ.5832
134. ಎ.ಕ.ಸಂ.9 ಶಾಸನ ಸಂಖ್ಯೆ 136, 137

**ಪರಾಮರ್ಶನ ಗ್ರಂಥಗಳು**


1. ಆರ್ಕೆ.ಮಣಿಪಾಲ್ -ಹೆಸರಿನಲ್ಲೇನಿದೆ?, ನ್ಯೂಸ್ಟಾರ್ ಪಬ್ಲಿಕೇಶನ್, ಬೆಂಗಳೂರು-78, 1989
2. ಕಲಬುರ್ಗಿ ಎಂ.ಎಂ - ಮಾರ್ಗ ಸಂಪುಟ-2, ಸಪ್ನ ಬುಕ್ಹೌಸ್, ತೃ.ಮುದ್ರಣ:2010
3. ಗೋಪಾಲಕೃಷ್ಣ ವಿ - ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ಕೋಲಾರ,1987
4. ಜವರೇಗೌಡ ದೇ. - ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು-12, 1990
5. ಬಾಗೂರು ನಾಗರಾಜಪ್ಪ -ಹೊಸದುರ್ಗ ಸುತ್ತ
6. ರಘುಪತಿಭಟ್ಟ ಕೆಮ್ತೂರ್ -ತುಳುನಾಡಿನ ಸ್ಥಳನಾಮಗಳು' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1979
7. ಸಿ.ಎಂ.ವಿಶ್ವನಾಥಯ್ಯ -ಕಡೂರು ತಾಲ್ಲೂಕಿನ ಸ್ಥಳನಾಮಗಳು, ಜ್ಞಾನಭಾರತಿ ಪ್ರಕಾಶನ, ಕಡೂರು, 2006

**ನಿಘಂಟು, ಶಾಸನಸಂಪುಟ, ವಿಶ್ವಕೋಶಗಳು**

1. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು (ಎಂಟು ಸಂಪುಟಗಳು) ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2010 ಎರಡನೆಯ ಮುದ್ರಣ, (1970)
2. ಎಫ್.ಕಿಟ್ಟೆಲ್ ಕನ್ನಡ-ಇಂಗ್ಲಿಶ್ ನಿಘಂಟು, ಮಂಗಳೂರು ಬಾಸೆಲ್ ಮಿಶನ್,1894, 2008 (15ನೇ ಮುದ್ರಣ)
3. ಎಪಿಗ್ರಾಫಿಯ ಕರ್ನಾಟಕ ಬಿ.ಎಲ್.ರೈಸ್, (ಸಂಪುಟ.11 ಚಿತ್ರದುರ್ಗ ಜಿಲ್ಲೆ), ಸರಕಾರಿ ಮುದ್ರಣಾಲಯ, ಬೆಂಗಳೂರು, 1901
4. ಕನ್ನಡ ವಿಶ್ವಕೋಶ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,1973